‘ಯಾರು ಹಿತವರು ನಿನಗೆ ಈ ಮೂವರೊಳಗೆ – ಮಾನಿನಿಯೊ? ಧಾರುಣಿಯೋ? ಬಹುಧನದ ಸಿರಿಯೊ?’

ಹೆಣ್ಣು, ಹಣ ಮತ್ತು ಭೂಮಿಗಳಲ್ಲಿ ನಮ್ಮ ಆಯ್ಕೆ ಯಾವುದು ಎನ್ನುವುದು ಪುರಂದರ ದಾಸರ ಪ್ರಶ್ನೆ. ಈ ಪ್ರಶ್ನೆ ನೀಡಿರುವ ಆಯ್ಕೆಗಳ ಬಗೆಗಿನ ತಕರಾರುಗಳು ಒತ್ತಟ್ಟಿಗಿರಲಿ; ಈ ಸಾಲನ್ನು ಆಧುನಿಕ ಸಂದರ್ಭದಲ್ಲಿನ ನಮ್ಮ ಆಯ್ಕೆಗಳ ಬಗ್ಗೆ ಮಾರ್ಮಿಕವಾಗಿ ಬಳಸಲಂತೂ ಸೊಗಸಾಗಿದೆ. ಉದಾಹರಣೆ ನೋಡಿ: ನಗರ, ಅರೆನಗರವಾಸಿಗಳೆಲ್ಲ ‘ನಾಯಿ, ಕೋತಿ ಮತ್ತು ಪಾರಿವಾಳಗಳ ಪೈಕಿ ಯಾವುದು ನಮಗೆ ಹಿತ’ ಎಂಬ ಪ್ರಶ್ನೆ ಕೇಳಿಕೊಳ್ಳಲು ಪುರಂದರರ ಹಾಡು ಸೊಗಸಾಗಿ ಒದಗಿಬರುತ್ತದೆ.

ನಾಯಿ, ಕೋತಿ, ಪಾರಿವಾಳಗಳಲ್ಲಿ ಆಯ್ಕೆಯ ಪ್ರಶ್ನೆ ಎಂದರೇನು? ಮೂರೂ ಇಷ್ಟವೇ ಎಂದು ಪ್ರಾಣಿಪ್ರಿಯರು ಹೇಳಬಹುದು. ಹಾಗೆ ಹೇಳುವ ಮೊದಲು ಕೆಳಗಿನ ಅಂಕಿಅಂಶಗಳನ್ನು ಗಮನಿಸಿ:

- ದೇಶದಲ್ಲಿ ದಿನವೊಂದಕ್ಕೆ ಇಪ್ಪತ್ತು ಸಾವಿರ ಬೀದಿ ನಾಯಿ ಕಡಿತದ ಪ್ರಕರಣಗಳು ವರದಿಯಾಗುತ್ತಿವೆ.
- ಪ್ರತಿ ದಿನ ಒಂದು ಸಾವಿರ ಜನ ಮಂಗಗಳಿಂದ ಕಚ್ಚಿಸಿಕೊಳ್ಳುತ್ತಿದ್ದಾರೆ.
- ಪಾರಿವಾಳದ ಹಿಕ್ಕೆ ಮತ್ತು ರೆಕ್ಕೆಗಳಿಂದ ಹೊಮ್ಮುವ ಸೂಕ್ಷ್ಮಕಣಗಳಿಂದ ಜನರಲ್ಲಿ ಶ್ವಾಸಕೋಶದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ.
- ರೇಬಿಸ್, ನ್ಯುಮೋನಿಯಾ, ಕ್ರಿಪ್ಟೊಕೋಕಲ್ ಮೆನಿಂಜೈಟಿಸ್ ಮತ್ತು ಸಿಟ್ಟಾಕೋಸಿಸ್ ಕಾಯಿಲೆಗಳು ಮನುಷ್ಯನನ್ನು ಬಾಧಿಸುತ್ತಿವೆ.

ಮೇಲಿನ ಅಂಕಿಅಂಶಗಳ ಜೊತೆಗೆ, ಕೆಳಗಿನ ಪ್ರಸಂಗಗಳನ್ನೂ ಗಮನಿಸಿ:



### ಪ್ರಸಂಗ 1

ಅಪಾರ್ಟ್‌ಮೆಂಟ್‌ನಲ್ಲಿ ಪಾರಿವಾಳಗಳ ಕಾಟ ಜಾಸ್ತಿಯಾಗಿದೆ; ಪಿಜನ್ ನೆಟ್ ಹಾಕಿಸಿಕೊಂಡರೆ ಸರಿ ಹೋಗಬಹುದಾ? ಎಂಬ ಪ್ರಶ್ನೆ ಹಿರಿಯರಾದ ನಾರಾಯಣ್‌ರಿಂದ ಬಂದಾಗ, ‘ತಕ್ಕಮಟ್ಟಿಗೆ ಕಡಿಮೆಯಾಗಬಹುದು’ ಎಂದೆ. ಅಷ್ಟರಲ್ಲೇ ‘ಬಾಲ್ಕನಿಗೆ ಮಾತ್ರ ಹಾಕಿಸಬಹುದು, ನೀರಿನ ಹಾಗೂ ಮಲಮೂತ್ರಗಳು ಹಾಯುವ ಪೈಪುಗಳನ್ನು ಕವರ್ ಮಾಡಿ ಹಾಕಿಸಲು ಅನುಮತಿ ಇಲ್ಲ, ರಿಪೇರಿ ಅಂತ ಬಂದಾಗ ಕಿತ್ತು ಹಾಕಿಬಿಡ್ತಾರೆ’ ಅಂದರು ಶ್ರೀನಿವಾಸ್. ಅದು ಶಾಶ್ವತ ಪರಿಹಾರ ಅಲ್ಲ ಎಂದು ಗೊತ್ತಾಯಿತು.

### ಪ್ರಸಂಗ 2

ಮನೆ ಕೆಲಸದ ಲಕ್ಷ್ಮಿ, ನನ್ನವಳ ಬಳಿ, ‘ಇನ್ನು ಮೂರು ದಿನ ರಜೆ ಬೇಕು, ಮಗನನ್ನು ಆಸ್ಪತ್ರೆಗೆ ಸೇರಿಸಿದ್ದೇನೆ’ ಎಂದಳು. ‘ಏನಾಯಿತು? ಶಾಲೆಗೆ ಹೋಗುತ್ತಿದ್ದನಲ್ಲ’ ಎಂದಾಗ, ‘ಹೋಗ್ತಾ ಇದ್ದ, ಈಗೆರಡು ದಿನಗಳಿಂದ ಇಲ್ಲ’ ಎಂದಳು. ಜ್ವರನಾ? ಎಂದದ್ದಕ್ಕೆ, ‘ಇಲ್ಲಮ್ಮ, ನಾಯಿ ಕಚ್ಚಿಬಿಟ್ಟಿದೆ. ನಮ್ಮ ಮನೇತಾವ ಬೀದಿನಾಯಿಗಳ ಕಾಟ ಜಾಸ್ತಿ ಆಗೋಗಿದೆ. ದಿನಾ ಇವ್ರಪ್ಪ ಗಾಡಿ ತಗಂಡೋಗಿ ಶಾಲೆಗೆ ಬಿಡ್ತಿದ್ದ. ಅವ್ರು ಊರಲ್ಲಿಲ್ಲ ಅಂತ ಇವನು ನಡ್ಕಂಡೇ ಶಾಲೆಗೆ ಹೋಗಿದ್ದ, ಸಾಯಂಕಾಲ ಬರ್ತಾ ಮೂರು ನಾಯಿಗಳು ಅಟ್ಟಸ್ಕಂಡ್‌ಬಂದ್ ಬಾಯಿ ಹಾಕ್ತವೆ, ಅದರಲ್ಲೊಂದು ಜೋರಾಗಿ ಕಚ್ಚಿ ಪಾದದತ್ರ ಮಾಂಸ ಕಿತ್ತೋಗಿದೆ, ಡಾಕ್ಟ್ರು ಅಡ್ಮಿಟ್ ಮಾಡಿಸಿಕೊಂಡಿದಾರೆ’ ಎಂದು ಕಣ್ಣೀರಾದಳು. ನಂತರ ಸಾವರಿಸಿಕೊಂಡು ‘ಎರಡು ಸಾವಿರ ಬೇಕಾಗಿತ್ತು ಕೊಟ್ಟೀರಮ್ಮ’ ಎಂದು ಹಣ ಇಸಿದುಕೊಂಡು, ಎಂಎಲ್‌ಎಗೆ ದೂರು ಕೊಡ್ತೀನಿ ಎಂದವಳೇ ಆಸ್ಪತ್ರೆ ಕಡೆ ನಡೆದಳು.

### ಪ್ರಸಂಗ 3

ವಾಹಿನಿಯೊಂದು ಇತ್ತೀಚೆಗೆ ಮಲೆನಾಡಿನಾದ್ಯಂತ ಮಂಗಗಳ ಹಾವಳಿ ತೀವ್ರವಾಗಿದ್ದು, ತೋಟದ ಬೆಳೆಗಳು ಮಂಗಗಳ ಪಾಲಾಗುತ್ತಿರುವುದರ ಸುದ್ದಿ ಬಿತ್ತರಿಸಿತು. ತಂಟೆಕೋರ ಮಂಗಗಳನ್ನು ನಿಯಂತ್ರಿಸಲೇಬೇಕು ಎಂದು ಬೆಳೆಗಾರರು ಪ್ರತಿಭಟಿಸಿದರು.

ಮೇಲಿನ ಮೂರೂ ಪ್ರಸಂಗಗಳಿಗೆ ಸಂಬಂಧವಿರುವಂತಿದೆ. ಇಡೀ ದೇಶ ಬೀದಿನಾಯಿ, ಕೋತಿ ಮತ್ತು ಪಾರಿವಾಳಗಳ ಹಾವಳಿಯಿಂದ ಕಂಗೆಟ್ಟಿರುವಂತೆ ಕಾಣಿಸುತ್ತದೆ. ನಿಯಂತ್ರಣ ಮೀರಿ ಹೆಚ್ಚಾಗಿರುವ ಈ ಪ್ರಾಣಿಗಳು ಜನರ ಆರೋಗ್ಯ, ಅನ್ನ, ನೆಮ್ಮದಿಗಳನ್ನು ಕಸಿಯುತ್ತಿವೆ. ಮಂಗ, ನಾಯಿ, ಪಾರಿವಾಳಗಳಿಂದ ಹಬ್ಬುವ